ಓ.ಎಸ್.111/2023 ಪಿ.ಡಬ್ಲು-1
*ದೊಡ್ಡಬಸಪ್ಪ ತಂದೆ ಕರೆಡೆಪ್ಪ ಈಚನಾಳ*

ದಿ.19-11-2024.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಪಾಟೀ ಸವಾಲು: ಶ್ರೀ ಹೆಚ್.ಬಿ ವಕೀಲರಿಂದ :-***

ನಮ್ಮ ಮೂಲ ಊರು ಕಸಬಾಲಿಂಗಸುಗುರು. ನಾನು ಕೂಲಿ ಕೆಲಸ ಮಾಡುತ್ತೇನೆ. ದಾವಾ ಆಸ್ತಿ ಮೂಲತ: ಸಿದ್ದಲಿಂಗೇಶ್ವರಗೌಡ ರವರ ಆಸ್ತಿಯಾಗಿರುತ್ತದೆ. ಸಿದ್ದಲಿಂಗೇಶ್ವರಗೌಡ ರವರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ಹೇಳಲು ಬರುವದಿಲ್ಲ. ಸಿದ್ದಲಿಂಗೇಶ್ವರಗೌಡ ರವರ ಮಗನ ಕಡೆಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ಸಿದ್ದಲಿಂಗೇಶ್ವರಗೌಡರು ತೀರಿಕೊಂಡ ನಂತರ ಫೋತಿ ವಿರಾಸತ್ ಆದಾರದ ಮೇಲೆ ಅವರ ಮಗನ ಹೆಸರಿಗೆ ಬಂದಿರುತ್ತದೆ. ನಾನು ಖರೀದಿ ಮಾಡಿದ ಆಸ್ತಿ ನಂ.3-2-140 ಇರುತ್ತದೆ. ನಾನು ದಾವೆ ಸಲ್ಲಿಸಿದ ಆಸ್ತಿಯ ಸಂಖ್ಯೆ: 3-2-140/ಐ ಇರುತ್ತದೆ. ನಾನು ಖರೀದಿ ಮಾಡಿದ ಆಸ್ತಿಗೂ ಮತ್ತು ದಾವಾ ಆಸ್ತಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಒಂದೆ ಆಸ್ತಿಯಲ್ಲಿ ಇಬ್ಬರು ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಆಸ್ತಿ ನಂ.3-2-140/ಐ ಖರಿದಿ ಮಾಡಿದ ಬಗ್ಎಗ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಆಸ್ತಿ ನಂ. 3-2-140/ಐ ಆಸ್ತಿಯೂ ಅಮರೇಶ ರವರ ಹೆಸರಿನಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆಸ್ತಿ ನಂ.3-2-140/ಐ ನನಗಾಗಲೀ ಮೂಲ ಮಾಲೀಕರಿಗಾಗಲೀ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ.

2. 2ನೇ ಪ್ರತಿವಾದಿ ಮಂಜುನಾಥ ರವರ ತಾಯಿಯ ಹೆಸರಿನಲ್ಲಿ ಆಸ್ತಿ ನಂ.3-2-140/ಐ ಇದ್ದು ಅದನ್ನು 2ನೇ ಪ್ರತಿವಾದಿಗೆ ನೊಂದಾಯಿತ ದಾನ ಪತ್ರದ ಮೂಲಕ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಆಸ್ತಿಯ ಪೂರ್ವಕ್ಕೆ ಖುಲ್ಲಾ ಜಾಗ ಬಿಟ್ಟು 2ನೇ ಪ್ರತಿವಾದಿಯ ಆಸ್ತಿ ಇದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತಮ್ಮ ಜಾಗದಲ್ಲಿ ಬಣವಿ ಹಾಕಿಕೊಂಡಿರುತ್ತಾರೆ ಎಂದರೆ ಸರಿ. ನಿ.ಪಿ-9 ಮತ್ತು 10 ರಲ್ಲಿ ಕಾಣುವ ಬಣವಿಗಳು ಮಂಜುನಾಥರವರಿಗೆ ಸಂಬಂಧಿಸಿದ್ದವು ಎಂದರೆ ಸಾಕ್ಷಿಯು ಅವರು ನಮ್ಮ ಜಾಗದಲ್ಲಿ ಬಣವಿ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಜಾಗೆಯನ್ನು ತೋರಿಸಲು ಫೋಟೋ ಬಿಟ್ಟು ಏನು ಹಾಕಿಲ್ಲ. ಪ್ರತಿವಾದಿಯರು ನಾವು ಬೆಂಗಳೂರಿಗೆ ದುಡಿಯಲು ಹೋದಾಗ ಬಣವಿಗಳನ್ನು ಹಾಕಿರುತ್ತಾರೆ. ಬಣವಿಗಳು ಆಸ್ತಿ ನಂ.3-2-140/ಐ ಜಾಗದಲ್ಲಿ ಇವೆ ಎಂದರೆ ಸರಿ. ಬಣವಿಗಳನ್ನು ತಗೆಯಿರಿ ಎಂದು ನಾವು ಪುರಸಭೆಯವರಿಗೆ ಅರ್ಜಿ ನೀಡಿರುವುದಿಲ್ಲ ಬಾಯಿ ಮಾತಿನಿಂದ ಹೇಳಿರುತ್ತೇವೆ. ನನ್ನ ಜಾಗೆಯನ್ನು ಒತ್ತುವರಿ

ಮಾಡಿದ ಬಗ್ಗೆ ಅಳತೆ ಮಾಡಲು ಪುರಸಭೆಯವರಿಗೆ ಅರ್ಜಿ ಕೊಟ್ಟಿರುವುದಿಲ್ಲ. 2ನೇ ಪ್ರತಿವಾದಿ ತಮ್ಮ ಜಾಗದಲ್ಲಿ ಬಣವಿ ಹಾಕಿಕೊಂಡಿದ್ದರಿಂದ ಅವರ ತಕರಾರು ಸಲ್ಲಿಸಿರುವದಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಪ್ರತಿವಾದಿಯರಿಗೆ ಮೊದಲಿನಿಂದಲೂ ವೈಷಮ್ಯ ಇದ್ದು ಮೊದಲಿನಿಂದಲೂ ಮಾತುಕತೆ ಇಲ್ಲ ಎಂದರೆ ಸರಿಯಲ್ಲ.

3. ನಮ್ಮ ಜಾಗದ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ ಮತ್ತು ಅಮರಪ್ಪ ರವರ ಜಾಗ, ಪಶ್ಚಿಮಕ್ಕೆ ಕುಪ್ಪಣ್ಣ ತಲೆವಡಕರ ರವರ ಜಾಗ, ಉತ್ತರಕ್ಕೆ ಅಂದೆ ಖರೀದಿ ಮಾಡಿದ ಕುಪ್ಪಣ್ಣನ ಜಾಗ, ದಕ್ಷಿಣಕ್ಕೆ ಜಾಗ ಇರುತ್ತದೆ. ಈ ಚೆಕ್ಕುಬಂದಿ ನಡುವೆ ಜಾಗ ಇದೆ ಎಂದು ತೋರಿಸಲು ದಾಖಲೆ ಹಾಕಿರುತ್ತೇವೆ. ಆ ರೀತಿ ಯಾವುದೇ ದಾಖಲೆ ಹಾಕಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರತಿಪಾದನೆ ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಜಾಗದಲ್ಲಿ ಯಾವುದೇ ಒತ್ತುವರಿ ಮಾಡಿಲ್ಲದಿದ್ದರೂ ಸಹ ಅವರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ಸ್ವಾಧೀನಕ್ಕೆ ಯಾವುದೇ ಅಡೆತಡೆ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ಜಾಗದಲ್ಲಿ ಬಣವಿ ಹಾಕಿದ್ದು ಉದ್ದೇಶ ಪೂರ್ವಕವಾಗಿ ಅವರ ಬಣವಿ ತೆಗೆದುಕೊಳ್ಳಬಾರದೆಂದು ಸುಳ್ಳೂ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ನಂ.3-2-140/ಐ ಪ್ರತಿವಾದಿಯರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.